ದಿನಾಂಕ 12.03.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನವನ್ನು ಭೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ಎಂ ಆರ್ ಎಸ್ ವಕೀಲರಿಂದಃ

ನಾನು 2009-10 ರಲ್ಲಿ ಪತ್ರ ಬರಹಗಾರರಾಗಿ ಪರವಾನಿಗೆ ಪಡೆದಿದ್ದೇನೆ. ವಾದಿ ನನಗೆ ಸುಮಾರು ವರ್ಷಗಳಿಂದ ಪರಿಚಯ ಇದ್ದಾರೆ. ಅವರು Real estate ಮಾಡುತ್ತಾರೆಂದು ಗೊತ್ತಿಲ್ಲ. Stamp Paper ನ್ನು ಅವರೇ ಶಶಿಕುಮಾರ್ ಮತ್ತು ಮಾರಾಟ ಮಾಡುವವರು ತಂದಿರುತ್ತಾರೆ. ಕರಾರು ಪತ್ರ ಮಾಡಲು ಎಷ್ಟು ರೂಪಾಯಿಗಳ Stamp Paper ಬೇಕು ಎಂದು ನಾನು ಹೇಳಿದ್ದೆ. ಕರಾರು 1 ಕೋಟಿ ಚಿಲ್ಲರೆ ಆಗಿರುತ್ತದೆ. 1 ಕೋಟಿಗೆ Stamp duty ಎಷ್ಟು ಆಗುತ್ತದೆ ಎಂದು ಈಗ ಮರೆತಿದ್ದೇನೆ. Stamp Paper ನ್ನು Article 12 ಅಡಿಯಲ್ಲಿ ತಂದ್ದೀವೆ Article 5 ಅಡಿಯಲ್ಲಿ ತರಬೇಕೆಂದು ನಾನು ಹೇಳಿರುವುದಿಲ್ಲ.

2. ನಿಪಿ-1 ಕ್ಕೆ ಹೆಬ್ಬೆಟ್ಟು ಮತ್ತು ಸಹಿಗಳನ್ನು ನಾನೇ ಹಾಕಿಸಿದ್ದೇನೆ. ಬರೆದುಕೊಟ್ಟವರು ಎಷ್ಟು ಜನ ಎಂದರೇ ದಾಖಲೆ ನೋಡಿ ಹೇಳಬೇಕು. ಸಾಕ್ಷಿ ನಿಪಿ-1ನ್ನು ನೋಡಿ 23 ಜನ ಎಂದು ಹೇಳಿರುತ್ತಾರೆ. 23 ಜನ ಹೆಬ್ಬೆಟ್ಟು ಮತ್ತು ಸಹಿಗಳನ್ನು ಹಾಕಿಸಿದ್ದೀರ ಎಂದರೇ ಹೌದು. ಸಾಕ್ಷಿ ನಿಪಿ-1 ರಲ್ಲಿರುವ ಪುಟ ಸಂಖ್ಯೆ 5 ರಲ್ಲಿ ಹೆಬ್ಬೆಟ್ಟು ಮತ್ತು ಸಹಿಗಳನ್ನು ಗುರುತು ಮತ್ತು ಲೆಕ್ಕ ಹಾಕಿ 22 ಇದೇ ಎಂದು ಹೇಳುತ್ತಾರೆ. ನಿಪಿ-1 ರಲ್ಲಿರುವ ಪುಟ ಸಂಖ್ಯೆ 4 ರಲ್ಲಿ ಹೆಬ್ಬೆಟ್ಟು ಮತ್ತು ಸಹಿಗಳನ್ನು ಗುರುತು ಮತ್ತು ಲೆಕ್ಕ ಹಾಕಿ 22 ಇದೇ ಎಂದು ಹೇಳುತ್ತಾರೆ. ನಿಪಿ-1 ರಲ್ಲಿರುವ ಪುಟ ಸಂಖ್ಯೆ 2 ರಲ್ಲಿರುವ ಹೆಬ್ಬೆಟ್ಟು ಮತ್ತು ಸಹಿಗಳನ್ನು ಗುರುತು ಮತ್ತು ಲೆಕ್ಕ ಹಾಕಿ 22 ಇದೇ ಎಂದು ಹೇಳುತ್ತಾರೆ. 23 ಜನರಲ್ಲಿ ಯಾರು ಸಹಿ ಹಾಕಿಲ್ಲ ಎಂದರೇ ಸಾಕ್ಷಿ ಸುಲೋಚನ ಎಂಬುವವರು ಸಹಿ ಹಾಕಿಲ್ಲ. ಆ ದಿನ ಸುಲೋಚನ ನಿಮ್ಮ ಪ್ರಕಾರ ಬಂದಿದ್ದಾರ ಎಂದರೇ ಬಂದಿದ್ದರೋ ಇಲ್ಲವೋ ಗೊತ್ತಿಲ್ಲ. ಆದರೆ ಸಹಿ ಹಾಕಿಲ್ಲ. ದಾಖಲೆ ಯನ್ನು ಪಹಣಿ ಪತ್ರಿಕೆ ಆಧಾರದ ಮೇಲೆ ತಯಾರಿಸಿದ್ದೇನೆ. ನಿಪಿ-2 ರಿಂದ 8 ರಲ್ಲಿರವ ಹೆಸರಿನಲ್ಲಿ ಪೇಪರ್ ನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿದ್ದೀರ ಎಂದರೇ ಇಲ್ಲ ಆದರೆ ಅವರು ತೆಗೆದುಕೊಂಡು ಬಂದಿರುತ್ತಾರೆ ನಾನು ತಯಾರು ಮಾಡಿಕೊಟ್ಟಿರುತ್ತೇನೆ. ನಿಪಿ-2 ರಿಂದ 8 ಆಧಾರದ ಮೇಲೆ 11 ಇನಕ್ಷೆ ಇಲ್ಲದೆ ನೋಂದಾಣಿ ಮಾಡಿಸಬಹುದು ಎಂದರೇ ಹೌದು. ಪತ್ರವನ್ನು ನನ್ನ ಹತ್ತಿರ ತಂದು ದಾಖಲೆಯನ್ನು ನೀಡಿ ತಯಾರು ಮಾಡಿಕೊಡುವಂತೆ ಹೇಳಿದ್ದರು. ನಿಪಿ-1 ರಲ್ಲಿ 4ನೇ ಪುಟದಲ್ಲಿರುವ 2ನೇ ಸಾಲಿನ ಮೊದಲ ಹೆಬ್ಬಿಟ್ಟಿನ ಗುರುತು ಯಾರದು ಎಂದು ಹೇಳಬಹುದಾ ಎಂದರೇ ಇಲ್ಲ.

3. ಪತ್ರ ಬರಹಗಾರರಾಗಿ ಪತ್ರದಲ್ಲಿರುವ ಬರವಣಿಗೆ ಮೇಲೆ ಹೆಬ್ಬಿಟ್ಟಿನ ಗುರುತು ಹಾಕಿಸಬಹುದು ಎಂದರೇ ಇಲ್ಲ. ಆದರೆ ಕೊಟ್ಟಾಗ ಹಾಕಿರುತ್ತಾರೆ. ಪಕ್ಷಗಾರರು ನನ್ನ ಮುಂದೆ ಎಷ್ಟು ಗಂಟೆಗೆ ಬಂದಿದ್ದರು ಎಂದು ಹೇಳಲಾಗುವುದಿಲ್ಲ. ಏಕೆಂದರೆ 10 ವರ್ಷದ ಹಿಂದೆ ಆಗಿರುತ್ತದೆ. ನನ್ನ ಪರವಾನಿಗೆ ಪ್ರಕಾರ ಬರೆದುಕೊಟ್ಟವರು ಮತ್ತು ಬರೆಸಿಕೊಟ್ಟವರ ವಿವರಗಳನ್ನು ರಿಜಿಸ್ಟರ್ ನಲ್ಲಿ ನಮೂದು ಮಾಡಬೇಕ ಎಂದರೇ ಇಲ್ಲ. ನೋಂದಾಣಿ ಆದರೂ ಇಲ್ಲದೆ ಇದ್ದರು ವಿವರಗಳನ್ನು ರಿಜಿಸ್ಟರ್ ನಲ್ಲಿ ನಮೂದು ಮಾಡಬೇಕ ಎಂದರೇ ಇಲ್ಲ. ನನ್ನ ಸಮಕ್ಷಮ ಯಾವುದೇ ಹಣ ಕೊಟ್ಟಿರುವುದಿಲ್ಲ. ನಿಪಿ-1 ನ್ನು ನಾನು ತಯಾರಿಸಿಲ್ಲ ನನ್ನ ಮುಂದೆ ಸಹಿ ಮಾಡಿಲ್ಲ ಹೆಬ್ಬಟ್ಟಿನ ಗುರುತ ಹಾಕಿಲ್ಲ ಎಂದರೇ ಸರಿಯಲ್ಲ. ನಿಪಿ-2 ರಲ್ಲಿ ಷರಾ ಎಂದು ಬರೆದಿದ್ದು ಯಾವುದೇ ದಾಖಲಾತಿಗಳ ಹೆಸರಿನ ಉದಾಹರಣೆ ಇಲ್ಲ ಎಂದರೇ ಸರಿಯಲ್ಲ.

4. Article 12 ಕರಾರನ್ನು ಸ್ವಾ ಧೀನ ರಹಿತ ನೋಂದಾಯಿತವಲ್ಲದ ಕರಾರನ್ನು ಬಿಟ್ಟು ಬೇರೆ ಕರಾರು ಮಾಡಲು ಬಳಸುತ್ತಾರೆ ಎಂದರೇ ಹೌದು. ನಿಪಿ-1 ರಲ್ಲಿ ಸ್ವಾ ಧೀನದ ಬಗ್ಗೆ ಬರೆದ್ದೀರ ಎಂದರೇ ಇಲ್ಲ. ನಿಪಿ-2 ಸ್ಟಾಂಪ್ ಪೇಪರ್ ನ್ನು ಯಾರು ತಂದ್ದಿರು ಎಂದರೇ ಹೇಳಲಾಗುವುದಿಲ್ಲ. ಪತ್ರ ಬರೆಯುವ ಪೂರ್ವದಲ್ಲಿ ಸ್ಟಾಂಪ್ ಪೇಪರ್ ನ್ನು ಕುಲಕುಂಶವಾಗಿ ಗುಮನಿಸಿದ್ದೀರ ಎಂದರೇ ಇಲ್ಲ. ನಿಪಿ-2 ನ್ನು 15.04.2019 ರ 11.20 ಗಂಟೆಗೆ ತಂದಿದ್ದಾರೆ. ನಾನು ನಿಪಿ-2ನ್ನು 15.04.2019 ರಲ್ಲಿ ಹಿಂದಿನ ದಿನಾಂಕ ಹಾಕಿ ಬರೆದುಕೊಟ್ಟಿದ್ದ್ಮೇನೆ. ಅದು ಕಾನೂನಿಗೆ ವಿರುದ್ದ ಎಂದು ಗೊತ್ತಿದ್ದು ಮಾಡಿದ್ದೀರ ಎಂದರೇ ಅವರ ಹೇಳಿಕೆ ಮೇಲೆ ಮಾಡಿದ್ದೇನೆ. ಕಾನೂನಿಗೆ ವಿರುದ್ದ ವಾದ ದಾಖಲಾತಿಗಳನ್ನು ಬರೆದು ಕೊಡುತ್ತಿರ ಎಂದರೇ ಇಲ್ಲ. ನಿಪಿ-2 ನ್ನು ಯಾವ font size ಮಾಡಿದ್ದೀರಿ ಎಂದರೇ 10 ರಲ್ಲಿ ಮಾಡಿದ್ದೇನೆ. ನಿಪಿ-1 ಮತ್ತು 2 ರ font size ಬೇರೆ ಬೇರೆ ಇದೆ ಎಂದರೇ ಹೌದು. ಅದೇ ಸೈಜ್ ನಲ್ಲಿ ಷರಾ ಬರೆದಿದ್ದಾರೆ ಒಂದೇ ಪುಟದಲ್ಲಿ ಮಾಡಬಹುದಾಗಿತ್ತು ಎಂದರೇ ಪಕ್ಷಗಾರರು ಒಂದೇ ಕಡೆ ಸಾಕು ಎಂದು ಹೇಳಿದ್ದರು.

5. ನಿಪಿ-1 ರಲ್ಲಿರುವ ಎಲ್ಲಾ ವ್ಯಕ್ತಿಗಳು ನಿಪಿ-2 ಕ್ಕೆ ಸಹಿ ಮಾಡಿಲ್ಲ ಎಂದರೇ ಹೌದು. ನಿಪಿ-2 ರಲ್ಲಿ ಇರುವ ವ್ಯಕ್ತಿಗಳ ಹೆಸರಿನಲ್ಲಿ ಯಾವುದೇ ಪಹಣಿ ಪತ್ರಿಕೆ ಇಲ್ಲ ಎಂದರೇ ಇಲ್ಲ. ಆದರೆ ನಿಪಿ-1 ಕ್ಕೆ ಅನುಗುಣವಾಗಿ ಷರಾ ಬರೆದಿದುಕೊಟ್ಟಿದ್ದೇನೆ. ನಿಪಿ-2 ನ್ನು ವಾದಿ, ಸಾಕ್ಷಿಗಳು ಮತ್ತು ನಾನು ಎಲ್ಲಾ ಸೇರಿ ಸೃಷ್ಟಿ ಮಾಡಿದ್ದೇನೆ ಎಂದರೇ ಸುಳ್ಳು. ನಿಪಿ-2 ರಲ್ಲ್ಕಿ ಸಹಿ ಮಾಡಿರುವ ವ್ಯಕ್ತಿಗಳು ಆ ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೇ ಸರಿಯಲ್ಲ. ನಿಪಿ-1 ರ ಕಾಲವಾಧಿ ಮುಗಿದ ಕಾರಣ ಕಾಲಮಿತಿಯನ್ನು ಒದಗಿಸಿಕೊಡಲು ನಿಪಿ-2 ನ್ನು ಸೃಷ್ಟಿ ಮಾಡಿದ್ದೇನೆ ಎಂದರೇ ಸುಳ್ಳು.

ವಾದಿಗೆ ಸಹಾಯ ಮಾಡಲು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೇ ಸುಳ್ಳು.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದ ಮೇರೆಗೆ ಬೆರಳಚ್ಚು ಮಾಡಲಾಯಿತು.)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

( ಎದುರುದಾರರು ಮಧ್ಯಂತರ ಅರ್ಜಿ ಒಂದಕ್ಕೆ ತಕರಾರು ಅರ್ಜಿ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

( ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)